**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ.786/2024**

**ಫಿರ್ಯಾದುದಾರರುಃ** ಬಿ.ಬಸವರಾಜ ಬಿನ್ ಪಿ.ಬಾದೋಬಯ್ಯ
ವಯಸ್ಸುಃ 63 ವರ್ಷ, ನಿವೃತ್ತಿ ಪ್ರಾಂಶಪಾಲರು,
ವಾಸಃ ವಿವಿ ನಗರ, ವಿಜಯಮೇರಿ ಶಾಲೆಯ ಹತ್ತಿರ
ಸಿರುಗುಪ್ಪ ಟೌಃ ತಾಃ ಬಳ್ಳಾರಿ ಜಿಲ್ಲೆ.

ವಿರುದ್ದ

**ಆರೋಪಿಃ** ಗವಿಸಿದ್ದಪ್ಪ ಬಿನ್ ಪಂಪಣ್ಣ, ವಃ 50 ವರ್ಷ,
ವಾಸಃ ಪುಟ್ಟರಾಜಾ ಗವಾಯಿ ಮನೆಯ ಹತ್ತಿರ
7 ನೇ ವಾರ್ಡ್, ಆದೋನಿ ರಸ್ತೆ,
ಸಿರುಗುಪ್ಪ ಟೌಃ ತಾಃ ಬಳ್ಳಾರಿ ಜಿಲ್ಲೆ.

**ಕಲಂ 313 ದಂಡ ಪ್ರಕ್ರಿಯಾ ಸಂಹಿತೆ ಅಡಿ ಆರೋಪಿಯ ಹೇಳಿಕೆಃ-**

**ಪ್ರಶ್ನೆ1)** ಃ ಇದುವರೆಗೂ ಫಿರ್ಯಾದುದಾರರ ಪರ ಸಾಕ್ಷಿ ವಿಚಾರಣೆಯನ್ನು ಆಲಿಸಿದ್ದೀರಾ?

**ಉತ್ತರಃ**

**ಪ್ರಶ್ನೆ2)** ಪ್ರಾಸಾ-1/ಬಿ.ಬಸವರಾಜ ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಪಿರ್ಯಾದುದಾರರಿಂದ ರೂ.15,00,000/- ಹಣವನ್ನು ದಿನಾಂಕ 01.08.2023 ರಂದು ಸಾಲವಾಗಿ ಪಡೆದಿರುವುದಾಗಿ, ಸದರಿ ಹಣವನ್ನು ಐದು ತಿಂಗಳೊಳಗಾಗಿ ವಾಪಸ್ಸು ನೀಡುವುದಾಗಿ ತಿಳಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತೀರಿ. ಅದಕ್ಕೆ ನೀವೇನು ಹೇಳುವಿರಿ?

ಉತ್ತರಃ-

ಪ್ರಶ್ನೆ3) ಸದರಿ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಗೆ ಸದರಿ ಹಣವನ್ನು ವಾಪಸ್ಸು ಕೊಡುವಂತೆ ಕೇಳಿದಾಗ ಸದರಿ ಆರೋಪಿಯು ಸದರಿ ಹಣದ ತೀರುವಳಿಗಾಗಿ ಹೆಚ್.ಡಿ.ಎಫ್.ಸಿ. ಬ್ಯಾಂಕ್, ಸಿರುಗುಪ್ಪ ಶಾಖೆಗೆ ಸೇರಿದ ತನ್ನ ಬ್ಯಾಂಕ್ ಖಾತೆಗೆ ಸೇರಿದ ಚೆಕ್

ನಂ.000015 ನೇದ್ದನ್ನು ದಿನಾಂಕ 22.12.2023 ಕ್ಕೆ ರೂ.5,00,000/- ಗಳಿಗೆ ನೀಡಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುವಿರಿ?

ಉತ್ತರಃ-

ಪ್ರಶ್ನೆ4) ಸದರಿ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಆರೋಪಿಯು ನೀಡಿದ ಚೆಕ್ಕನ್ನು ಕೆನರಾ ಬ್ಯಾಂಕ್, ಸಿರುಗುಪ್ಪ ಶಾಖೆಗೆ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ಆರೋಪಿಯ ಖಾತೆಯನ್ನು ಪರಿಶೀಲಿಸಿ ಚೆಕ್ಕನ್ನು ಮಾನ್ಯ ಮಾಡಲು ಆರೋಪಿಯ ಖಾತೆಯಲ್ಲಿ '**Payment Stopped'**ಎಂಬ ಹಿಂಬರಹದೊಂದಿಗೆ ದಿನಾಂಕ 09.02.2024 ರಂದು ವಾಪಸ್ಸು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುವಿರಿ?

ಉತ್ತರಃ-

ಪ್ರಶ್ನೆ5) ಸದರಿ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ವಿಚಾರವಾಗಿ ದಿನಾಂಕ 21.02.2024 ರಂದು ಆರೋಪಿಗೆ ವಕೀಲರ ಮೂಲಕ ತಿಳುವಳಿಕೆ ಪತ್ರವನ್ನು ನೀಡಿದ್ದು, ಸದರಿ ತಿಳುವಳಿಕೆ ಪತ್ರ ಆರೋಪಿಗೆ ಖುದ್ದು ಜಾರಿಯಾಗಿದ್ದರೂ ಸಹ ಆರೋಪಿಯು ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುವಿರಿ?

ಉತ್ತರಃ

**ಪ್ರಶ್ನೆ6)** ಈ ಮೊಕದ್ದಮೆಯಲ್ಲಿ ನಿಮ್ಮ ಪರ ಯಾರನ್ನಾದರೂ ಸಾಕ್ಷಿಗಳನ್ನಾಗಿ ವಿಚಾರಣೆ ಮಾಡುತ್ತೀರಾ?

**ಉತ್ತರಃ**

**ಪ್ರಶ್ನೆ7)** ಈ ಮೊಕದ್ದಮೆಯಲ್ಲಿ ನೀವು ಮತ್ತೇನಾದರೂ ಹೇಳುವುದಿದೆಯೇ?

**ಉತ್ತರಃ**

(ದಿನಾಂಕ 03.03.2026 ರಂದು ಮೇಲ್ಕಂಡ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಪಡೆದುಕೊಂಡು ಮೇಲ್ಕಂಡ ಪ್ರಶ್ನೆಗಳಿಗೆ ಆರೋಪಿಯು ತಮ್ಮ ಸ್ವ ಇಚ್ಛೆಯಿಂದ ಕೊಟ್ಟ ಹೇಳಿಕೆಗಳಾಗಿರುತ್ತವೆ ಅಂತ ನಾನು ದೃಢೀಕರಿಸುತ್ತೇನೆ).

( ಅಶೋಕ ಆರ್. ಎಚ್.)
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,**ಸಿರುಗುಪ್ಪ.